**<u>ಬಂಟ್ವಾಳ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ</u>**

**<u>ಸಿ.ಸಿ. ನಂ. 307-2023</u>**

**ಪ್ರಾಸಾ ಃ 8**

| | |
|---|---|
| **ಹೆಸರು** | ಃ ಚರಣ್ ಕೆ |
| **ತಂದೆಯ ಹೆಸರು** | ಃ ಕೆ ಭೋಜ ಸುವರ್ಣ |
| **ಪ್ರಾಯ** | **: 59 ವರ್ಷ** |
| **ಉದ್ಯೋಗ** | ಃ ಹಿರಿಯ **ಮೋಟಾರು ವಾಹನ ನಿರೀಕ್ಷಕರು,** ಎ ಆರ್ ಟಿ ಒ ಬಂಟ್ವಾಳ |
| **ವಾಸಸ್ಥಳ** | ಃ ಬಂಟ್ವಾಳ |

---

**ದಿನಾಂಕ: 13.01.2026ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

---

**<u>ಮುಖ್ಯ ವಿಚಾರಣೆ : ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:</u>**

**ನಾನು** ಮಾರ್ಚ್ **2018** ರಿಂದ **2025** ರವರೆಗೆ ಬಂಟ್ವಾಳ ಉಪ **ಪ್ರಾದೇಶಿಕ ಸಾರಿಗೆ ಕಚೇರಿಯಲ್ಲಿ** ಹಿರಿಯ **ಮೋಟಾರು ವಾಹನ ನಿರೀಕ್ಷಕನಾಗಿ ಕರ್ತವ್ಯ ನಿರ್ವ**ಹಿಸಿರುತ್ತೇನೆ.

**2.** ದಿನಾಂಕ **06.05.2022** ರಂದು ವಿಟ್ಲ ಪೊಲೀಸ್ ಠಾಣೆಯಿಂದ ಬಂದ ಮನವಿ ಮೇರೆಗೆ ದಿನಾಂಕ **07.05.2022** ರಂದು ಸುರೇಕುಮೇರುವಿನ ಎಚ್.ಪಿ. ಪೆಟ್ರೋಲ್ ಬಂಕ್ ಆವರಣದಲ್ಲಿ ಕೆಎ**-14-**ಬಿ**-2579** ನೇ ವಾಹನವನ್ನು ನಿಂತ ಸ್ಥಿತಿಯಲ್ಲಿಯೇ ಪರಿಶೀಲನೆ ಮಾಡಿ ನೋಡಲಾಗಿ ಸದರಿ ವಾಹನದ ಎದುರಿನ ಬಂಪರ್**,** ಶೇಪ್**,** ವಿಂಡ್ ಶೀಲ್ಡ್ ಗ್ಲಾಸ್**,** ಮುಂಬಾಗದ ಕ್ಯಾಬಿನ್**,** ಎದುರು ಬದಿಯ **2** ಹೆಡ್ ಲೈಟ್ ಹಾಗೂ ಕ್ಯಾಬಿನ್ ಜಖಂ ಗೊಂಡಿರುತ್ತವೆ. ವಾಹನವನ್ನು ನಿಂತ ಸ್ಥಿತಿಯಲ್ಲಿಯೇ ಪರಿಶತಿಲಲಿಸಿ ನೊಎಾಡಲಾಗಿ ಬ್ರೇಕ್ ಸುಸ್ಥಿತಿಯಲ್ಲಿತ್ತು. ಸದರಿ ಅಪಘಾತ ಯಾವುದೇ ಯಾಂತ್ರಿಕ ದೋಷದಿಂದ ಸಂಭವಿಸಿರುವುದಿಲ್ಲ ಎಂಬುದಾಗಿ ನಾನು ವರದಿ ನೀಡಿರುತ್ತೇನೆ. ಸಾಕ್ಷಿಯು ಸದರಿ ವರದಿಯನ್ನು ಹಾಗೂ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು**,** ವಾಹನ ಅಪಘಾತ ವರದಿಯನ್ನು ನಿ.ಪಿ. **16** ಎಂದು**,** ಸಾಕ್ಷಿಯ ಸಹಿಯನ್ನು ನಿ.ಪಿ. **16(**ಎ**)** ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿತರ ಪರ ಃ ಶ್ರೀ ಸಿ.ಎಂ ವಕೀಲರಿಂದಃ**

**2.** ನಾನು ವಾಹನ ಪರಿಕ್ಷಿಸುವ ಸಂದರ್ಬದಲ್ಲಿ ಅಪಘಾತ ಸ್ಥಳಕ್ಕೆ ಹೋಗಿರುವುದಿಲ್ಲ. ಆ ಸಂದರ್ಬದಲ್ಲಿ ವಾಹನಕ್ಕೆ ಸಂಬಂದಿಸಿದ ಫಿಟ್ ನೆಸ್ ಸರ್ಟಿಫಿಕೇಟನ್ನು ನಾನು ಪರಿಶೀಲಿಸಿರುವುದಿಲ್ಲ. ಸದರಿ ವಾಹನ ಯಾವ ಆರ್.ಟಿ.ಒ ಗೆ ಸಂಬಂದಿಸಿದ್ದು ಎಂಬ ಬಗ್ಗೆ ನಾನು ನಮೂದಿಸಿರುವುದಿಲ್ಲ. ಅಪಘಾತ ಸ್ಥಳದಿಂದ ವಾಹನವನ್ನು ಹೆಚ್‌ಪಿ. ಪೆಟ್ರೋಲ್ ಬಂಕ್ ಆವರಣಕ್ಕೆ ಹೇಗೆ ತಂದಿರುತ್ತಾರೆ ಎಂದು ನಾನು ತಿಳಿದುಕೊಂಡಿರುವುದಿಲ್ಲ. ನನ್ನ ವರದಿಯ ಪ್ರಕಾರ ಸದರಿ ವಾಹನಕ್ಕೆ ಯಾವುದೇ ಯಾಂತ್ರಿಕ ವೈಪಲ್ಯ ಇರಲಿಲ್ಲ. ನಾನು ವಾಹನವನ್ನು ಪರಿಕ್ಷಿಸುವ ಸಂದರ್ಬದಲ್ಲಿ ವಾಹನಕ್ಕೆ ಆಗಿರುವ ಡ್ಯಾಮೇಜ್ ಎಷ್ಟು ಸಮಯದ ಹಿಂದೆ ಆಗಿದೆ ಎಂದು ನಿಖರವಾಗಿ ಹೇಳಲಾಗುವುದಿಲ್ಲ. ಸಾಕ್ಷಿಯು ಮುಂದುವರಿದು ಸದರಿ ವಾಹನಕ್ಕೆ ಡ್ಯಾಮೇಜ್ ಹೊಸದಾಗಿ ಆಗಿರುವುದು ಕಂಡುಬಂದಿದ್ದು ಎಂದು ನುಡಿಯುತ್ತಾರೆ. ಯಾವುದೇ ವಾಹನ ಅಪಘಾತ ಆದಾಗ ವಾಹನಕ್ಕೆ ಸಂಬಂದಿಸಿದಂತೆ ಆದ ಡ್ಯಾಮೇಜ್ ಬಗ್ಗೆ ನಮ್ಮ ಕಚೇರಿಯಲ್ಲಿ ನಮೂದಾಗಿರುತ್ತದೆ ಎಂದರೆ ಸಾಕ್ಷಿಯು ಎಲ್ಲಾ ಪ್ರಕರಣಗಳಲ್ಲಿ ಆಗುವುದಿಲ್ಲ ಎಂದು ನುಡಿಯುತ್ತಾರೆ. ಈ ಪ್ರಕರಣದ ವಾಹನಕ್ಕೆ ಸಂಬಂದಿಸಿದಂತೆ ನಾನು ನಮ್ಮ ಕಚೇರಿಯ ಗಣಕ ಯಂತ್ರದ ತಂತ್ರಾಂಶವನ್ನು ಪರಿಶೀಲಿಸಿರುವುದಿಲ್ಲ. ರಸ್ತೆಯಲ್ಲಿ ವಾಹನವನ್ನು ವೇಗವಾಗಿ ಚಲಾಯಿಸಿ ತಕ್ಷಣ ಬ್ರೇಕ್ ಹಾಕಿದಾಗ ಮುಂದಿನ ವಾಹನಕ್ಕೆ ವಾಹನ ತಾಗಿಸಿ ಮೇಲೆ ಹೇಳಿದಂತೆ ವಾಹನಕ್ಕೆ ಡ್ಯಾಮೇಜ್ ಆಗುವ ಸಂಬವ ಇತರುತ್ತದೆ ಎಂದರೆ ಸರಿ. ನಾನು ಚಾಸಾ 1 ರವರ ಕೋರಿಕೆಯ ಮೇರೆಗೆ ಸುಳ್ಳು ವರದಿಯನ್ನು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ವಿಚಾರಗಳು ಸತ್ಯಕ್ಕೆ ದೂರವಾಗಿದೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

**ನನ್ನ ಉಕ್ತಲೇಖನಾ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓದಿ ಹೇಳಲಾಗಿ ಕೇಳಿ ಸರಿ ಇದೆ.**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ., ಬಂಟ್ವಾಳ**